ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಜೆ ಎಂ ಎಫ್ ಸಿ.,
ನ್ಯಾಯಾಲಯ,ಹೊಸದುರ್ಗ.

ಅಸಲು ದಾವಾ ಸಂಖ್ಯೆ **83/2020** ದಿನಾಂಕ: **15.07.2025**

ಪಿ.ಡಬ್ಲ್ಯೂ: **1**

**ಸಾಕ್ಷಿಯನ್ನು ಕರೆಸಿ ಪ್ರಮಾಣೀಕರಿಸಲಾಯಿತು.**

**ಮುಂದುವರೆದ ಪಾಟೀ ಸವಾಲು: 1 ರಿಂದ 5 ನೇ ಪ್ರತಿವಾದಿಯರ ಪರ ಶ್ರೀ ಜಿ ಬಿ ವಕೀಲರಿಂದ**

7. ನನ್ನ ಮುಖ್ಯ ವಿಚಾರಣೆ ಪ್ರಮಾಣ ಪತ್ರದಲ್ಲಿ ಬರೆದಿರುವ ವಿಚಾರಗಳು ನನಗೆ ಗೊತ್ತು. ನಮ್ಮ ಕುಟುಂಬಕ್ಕೆ ಸೇರಿದ ಇತರೆ ಆಸ್ತಿಗಳನ್ನು ಈ ದಾವೆಯಲ್ಲಿ ನಾನು ಸೇರಿಸಿರುವುದಿಲ್ಲ. ನನ್ನ ತಂದೆ ಕರಿಬಸಪ್ಪ ಮತ್ತು ಮಲ್ಲಶೆಟ್ಟಿ ರವರ ನಡುವೆ ಪಾಲುವಿಭಾಗ ಆಗಿ ಅದರಂತೆ ನನ್ನ ತಂದೆ ಪಾಲಿಗೆ ಬಂದ ಆಸ್ತಿಗಳಲ್ಲಿನಾನು ಮತ್ತು ನನ್ನ ಅಣ್ಣ ಇಬ್ಬರು ವಿಭಾಗ ಮಾಡಿಕೊಂಡು ಅನುಭವಿಸುತ್ತಿದ್ದೇವೆ ಎಂದರೆ ಸರಿ. ಸಾಕ್ಷಿ ಮುಂದುವರೆದು ತನ್ನ ಮತ್ತು ತನ್ನ ಅಣ್ಣನ ಹೆಸರು ಜಂಟಿಯಾಗಿ ಇರುತ್ತದೆ ಎಂದು ನುಡಿಯುತ್ತಾರೆ. ದಾವಾ ಆಸ್ತಿಗಳು ನಮ್ಮ ಕುಟುಂಬಕ್ಕೆ ಸೇರಿದ ಆಸ್ತಿಗಳಾಗಿ ಉಳಿದಿರುವುದಿಲ್ಲ ಎಂದರೆ ಸರಿಯಲ್ಲ. ನಮಗೂ ದಾವಾ ಆಸ್ತಿಗಳಿಗೂ ಯಾವುದೇ ಸಂಬಂಧ ಇರುವುದಿಲ್ಲ ಎಂದರೆ ಸರಿಯಲ್ಲ.

8. ನನ್ನ ಮುತ್ತಜ್ಜ ಸಣ್ಣಮರುಳಪ್ಪ ರವರ ವಾಗ್ದಾನದ ಮೇರೆಗೆ ಪರಪ್ಪಶೆಟ್ಟಿ ಮತ್ತು ನಿಂಗಾಶೆಟ್ಟಿ ರವರು ದಾವಾ ಆಸ್ತಿಗಳನ್ನು ಚನ್ನಬಸಮ್ಮ ರವರ ಮಗ ಸಿದ್ದರಾಮಯ್ಯ ರವರಿಗೆ ದಾನ ಬರೆದುಕೊಟ್ಟಿದ್ದರು ಎಂದರೆ ಸಾಕ್ಷಿ ತನ್ನ ಮುತ್ತಜ್ಜ ಅವರಿಗೆ ಜೀವನಾಂಶದ ರೂಪದಲ್ಲಿ ಕೊಟ್ಟಿದ್ದರು ಎಂದು ಉತ್ತರಿಸುತ್ತಾರೆ . ಸದರಿ ದಾನದ ಮೇರೆಗೆ ಸಿದ್ದರಾಮಯ್ಯ ಹೆಸರಿಗೆ ಖಾತೆ ಆಗಿರುತ್ತದೆ ಎಂದರೆ ಸಾಕ್ಷಿ ಮೊದಲಿನಿಂದಲೂ ಪರಪ್ಪಶೆಟ್ಟಿ , ನಿಂಗಾಶೆಟ್ಟಿ ಮತ್ತು ಸಿದ್ದರಾಮಯ್ಯ ಹೆಸರಿಗೆ ಜಂಟಿ ಖಾತೆ ಇತ್ತು ಎಂದು ಉತ್ತರಿಸುತ್ತಾರೆ. ಈ ರೀತಿಜಂಟಿ ಖಾತೆ ಇರುವ ಬಗ್ಗೆ ಪಹಣಿ ಪತ್ರಿಕೆ ಮತ್ತು ನಮೂನೆ 5 ಹಾಗೂ 6 ನ್ನು ಹಾಜರು ಮಾಡಿರುತ್ತೇನೆ . ಸಿದ್ದರಾಮಯ್ಯ ಹೆಸರಿಗೆ ಪ್ರತ್ಯೇಕವಾಗಿ ಖಾತೆ ಆದ ಬಗ್ಗೆ ಪ್ರಶ್ನೆ ಮಾಡಿರುತ್ತೀರಾ ಎಂದರೆ ಸಾಕ್ಷಿ ಸರ್ವೇ ನಂ.48 ರಲ್ಲಿ 3 ಪೋಡಿ ಆಗಿದ್ದು ಪೋಡಿ ನಂ. 1 ರಲ್ಲಿ 7 ಎಕರೆ 32 ಗುಂಟೆ ಪರಪ್ಪಶೆಟ್ಟಿ , ನಿಂಗಪ್ಪಶೆಟ್ಟಿ ಮತ್ತು ಸಿದ್ದರಾಮಯ್ಯ ರವರಿಗೆ ಜಂಟಿ ಖಾತೆ , ಪೋಡಿ ನಂ. 2 ರಲ್ಲಿ 7 ಎಕರೆ 20 ಗುಂಟೆಯಲ್ಲಿ 1 ರಿಂದ 3 ನೇ ಪ್ರತಿವಾದಿಯರ ಹೆಸರಿಗೆ ಜಂಟಿಯಾಗಿ ಖಾತೆ ಹಾಗೂ ಪೋಡಿ ನಂ. 3 ರಲ್ಲಿ 15 ಎಕರೆ ಜಮೀನನ್ನು ಸಿದ್ದರಾಮಯ್ಯ ಹೆಸರಿನಲ್ಲಿ ಖಾತೆ ಮಾಡಲಾಗಿರುತ್ತದೆ ಎಂದು ಉತ್ತರಿಸುತ್ತಾರೆ. ಸಾಕ್ಷಿ ಮುಂದುವರೆದು 2014-2015 ರಲ್ಲಿ ಸದರಿ ಪೋಡಿಗಳನ್ನು ಒಟ್ಟುಗೂಡಿಸಿ 2017 ರಲ್ಲಿ ಪರಪ್ಪಶೆಟ್ಟಿ ಹೆಸರನ್ನು ವಿನಾಕಾರಣ ತೆಗೆದುಹಾಕಿರುತ್ತಾರೆ , ನಂತರ ಪ್ರತಿವಾದಿ 1 ಮತ್ತು 2 ರವರ ಹೆಸರುಗಳು ದಾಖಲೆಯಲ್ಲಿ ಮುಂದುವರೆದಿರುತ್ತವೆ ಎಂದು ನುಡಿಯುತ್ತಾರೆ. ಈ ರೀತಿ ಖಾತೆ ಬದಲಾವಣೆ ಆದ ಬಗ್ಗೆ ನಾನು ರೆವಿನ್ಯೂ ಅಧಿಕಾರಿಗಳಲ್ಲಿ ಪ್ರಶ್ನೆ ಮಾಡಿರುತ್ತೇನೆ .

9. ದಾವಾ ಆಸ್ತಿಗಳು ನಮ್ಮ ಮತ್ತು ಪ್ರತಿವಾದಿಯರ ಒಟ್ಟು ಕುಟುಂಬದ ಆಸ್ತಿಗಳು ಆಗಿರುವುದಿಲ್ಲ ಎಂದರೆ ಸರಿಯಲ್ಲ. ಖಾತೆ ಬದಲಾವಣೆ ಆದ ಬಗ್ಗೆ ರೆವಿನ್ಯೂ ಅಧಿಕಾರಿಗಳಲ್ಲಿ ನಾನು ಪ್ರಶ್ನೆ ಮಾಡಿರುವುದಿಲ್ಲ ಎಂದರೆ ಸರಿಯಲ್ಲ. ಈ ಬಗ್ಗೆ ನಾನು ದಾಖಲೆಗಳನ್ನು ಹಾಜರು ಮಾಡಿರುವುದಿಲ್ಲ. ನನಗೆ ದಾವಾ ಆಸ್ತಿಗಳಲ್ಲಿ ಯಾವುದೇ ರೀತಿಯ ಹಕ್ಕು ಅಧಿಕಾರ ಇಲ್ಲದಿದ್ದರೂ

ಪ್ರತಿವಾದಿಯರಿಗೆ ತೊಂದರೆ ಕೊಡುವ ಉದ್ದೇಶದಿಂದ ಸುಳ್ಳು ದಾವೆ ದಾಖಲಿಸಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ . ನಮ್ಮ ಕುಟುಂಬಕ್ಕೆ ಬರಬೇಕಾದ ಆಸ್ತಿಗಳಲ್ಲಿ ಈಗಾಗಲೇ ಹಿಸ್ಸೆ ಪಡೆದು ಅವುಗಳಲ್ಲಿ ಕೆಲವು ಅಸ್ತಿಗಳನ್ನು ಸಹ ಮಾರಾಟ ಮಾಡಿರುತ್ತೇವೆ ಎಂದರೆ ಸಾಕ್ಷಿ ದಾವಾ ಆಸ್ತಿಗಳಲ್ಲಿ ಹಿಸ್ಸೆ ಇರುತ್ತದೆ ಎಂದು ಉತ್ತರಿಸುತ್ತಾರೆ. ನಾವು ಮತ್ತು ಪ್ರತಿವಾದಿಯರು ದಾವಾ ಆಸ್ತಿಯ ಜಂಟಿ ಮಾಲೀಕರು ಎಂದು ತೋರಿಸಲು ದಾಖಲೆಗಳನ್ನುಹಾಜರುಮಾಡಿರುವುದಿಲ್ಲ ಎಂದರೆ ಸರಿಯಲ್ಲ . ನಾನು ಸುಳ್ಳು ಪ್ರಮಾಣ ಪತ್ರ ಹಾಜರು ಮಾಡಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ .

(6 ನೇ ಪ್ರತಿವಾದಿ ಪರ ಲಿಖಿತ ಹೇಳಿಕೆ ಸಲ್ಲಿಸದ ಕಾರಣ ಪಾಟೀ ಸವಾಲು ಇಲ್ಲವೆಂದು ಪರಿಗಣಿಸಲಾಯಿತು)

**ಮರು ವಿಚಾರಣೆ ಇಲ್ಲ.**

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು.)**

ಓ ಹೇ ಕೇ ಸರಿ ಇದೆ.

(ಪ್ರಸನ್ನ ಕುಮಾರ್ ಸಿ)
ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ.,ನ್ಯಾಯಾಲಯ ಹೊಸದುರ್ಗ.